**ಪ್ರಕೃತಿದತ್ತವಾಗಿ ಸಿಗುವ ತೆಂಗಿನ ಗರಿಯಿಂದ ವಾಚ್, ಗಿರ್ಗಿಟ್, ಹಾವು ಮುಂತಾದ ಆಟಿಕೆಗಳನ್ನು ಮಾಡಿ ಆಟವಾಡಿ ಸಂಭ್ರಮಿಸುವ ಕಾಲ ತೆರೆಮರೆಗೆ ಸರಿದಿದೆ. ರಾಸಾಯನಿಕಮುಕ್ತ ಪ್ಲಾಸ್ಟಿಕ್ ಆಟಿಕೆಗಳನ್ನು ಬಳಸಿ ಆರೋಗ್ಯ ಹದಗೆಡಿಸಿಕೊಳ್ಳುವ ಬದಲು ನಿಸರ್ಗದತ್ತ ವಸ್ತುಗಳಿಂದ ಮಾಡಿದ ಆಟಿಕೆ ಮಕ್ಕಳಿಗೆ ಹೆಚ್ಚು ಖುಷಿ ಕೊಡುತ್ತದೆ.**

ಕನ್ನಡಕ, ಮೀನು, ಹಾವು ಇತ್ಯಾದಿ ದಶಕಗಳ ಹಿಂದಿನವರೆಗೂ ಗ್ರಾಮೀಣ ಪ್ರದೇಶದ ಮಕ್ಕಳ ಪ್ರಕೃತ್ತಿದತ್ತ ಆಟಿಕೆಗಳಾಗಿದ್ದವು. ಈಗಲೂ ಅಲ್ಲಲ್ಲಿ ಇರುವ ಮುಳಿ ಮಾಡಿನ ಸಂಸಾರದಲ್ಲಿ, ಮಣ್ಣಿನ ಕಟ್ಟೆಯಿರುವ ಅಂಗಳದಲ್ಲಿ, ಮಕ್ಕಳು ಮಣ್ಣಿನಲ್ಲಿ ಬರಿಗಾಲಿನಲ್ಲಿ ನಡೆಯಬೇಕು, ಪ್ರಕೃತಿ ಜೊತೆಗೆ ಪಾಠ ಕಲಿಯಬೇಕು ಎನ್ನುವ ತುಡಿತ ಇರುವ ಮನೆ ಮನಗಳಲ್ಲಿ ಇಂಥದ್ದೊಂದು ನೋಟ ಅಪರೂಪಕ್ಕೊಮ್ಮೆಯಾದರೂ ಕಾಣಸಿಗುತ್ತದೆ. ಇವು ಹಳ್ಳಿಹಾಡಿಯ ಬಡತನದ ಆರೋಗ್ಯ ಶ್ರೀಮಂತ ಆಟಗಳು.

## ತೆಂಗಿನ ಗರಿ ಆಟಿಕೆಗಳಿಗಷ್ಟೇ ಸೀಮಿತವಲ್ಲ

ತೆಂಗಿನ ಗರಿಯ ಕಲೆ ಆಟಿಕೆಗಳಿಗಷ್ಟೇ ಸೀಮಿತವಲ್ಲ ಕರಾವಳಿ ಪ್ರದೇಶದ ಜನಪದ ಸಂಸ್ಕೃತಿಯ ಶ್ರೀಮಂತ ಕಲೆ. ಧಾರ್ಮಿಕ ಆಚರಣೆಯಲ್ಲಿ ಅವಿನಾಭಾವವಾಗಿ ಬೆಸೆದುಕೊಂಡು ಕಲಾತ್ಮಕ ಸಂಪತ್ತು. ಬಹೂಪಯೋಗಿ ಕಲ್ಪವೃಕ್ಷದ ಗರಿಗಳನ್ನೆಲ್ಲಾ ಸೇರಿಸಿ ಹೆಣೆದರೆ ತಾತ್ಕಾಲಿಕ ತಟ್ಟೆಯ ಗೋಡೆ, ಬಿರು ಬೇಸಿಗೆಯ ಝಳಕ್ಕೆ ನೆರಳ ನೀಡುವ ಚಪ್ಪರ. ಧೋ... ಎಂದು ಸುರಿಯುವ ಮಳೆಗೆ ಮನೆಯ ಅಂಗಳಕ್ಕೆ ತೆಂಗಿನ ಗರಿಯೇ ಹಾಸು. ಪಾಚಿ ಕಟ್ಟದಿರುವಂತೆ, ಕಳೆಗಿಡ ಹುಟ್ಟದಂತೆ, ಮಣ್ಣಿನ ಮೇಲ್ಪದರ ಕೊಚ್ಚಿಹೋಗದಂತೆ ಇರುವ ರಕ್ಷಾ ಕವಚವೂ ಹೌದು.

### ಆಟವಲ್ಲ; ಇದು ಪ್ರಕೃತಿಯ ಪಾಠ

ಒಂದೆಡೆ ಪ್ರಕೃತಿದತ್ತ ಆಟಿಕೆಗಳು ಮಕ್ಕಳನ್ನು ಹಸಿರಿನ ಬಾಂಧವ್ಯದತ್ತ ಕೊಂಡೊಯ್ದರೆ, ಇನ್ನೊಂದೆಡೆ ಇದು ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆಯ ಟಾನಿಕ್ ಇದ್ದ ಹಾಗೆ. ಪಾರಂಪರಿಕ ಕೌಶಲ್ಯದ ಕೊಂಡಿಯಾಗಿರುವ ಈ ಹಸಿರಾಟಿಕೆಗಳ ತಯಾರಿ ಪಕ್ಕಾ ಕಣ್ಣಳತೆಯಲ್ಲೇ ನಡೆಯುವ ಅಪರೂಪದ ಕಲೆ. ಗಣಿತದ ಮೇಷ್ಟರ ಹಂಗಿಲ್ಲದೆ ಉದ್ದ ಅಗಲದ ಕರಾರುವಾಕ್ ಲೆಕ್ಕಾಚಾರದ ತಂತ್ರ. ಜೊತೆಗೆ ಬುದ್ಧಿಗೂ ಕೈಗೂ ಏಕಕಾಲದಲ್ಲಿ ಕಸರತ್ತು. ಬಹುಶಃ ಇಂತಹಾ ಕಲಿಕೆ ನಲಿಕೆ ಎಲ್ಲಾ ಮಕ್ಕಳಿಗೆ ಸಿಕ್ಕರೆ ನಾಲ್ಕು ಗೋಡೆಗಳ ನಡುವೆ ಕೌಶಲ್ಯ ಕಲಿಸುವ ಸಮ್ಮರ್ ಕ್ಯಾಂಪಿನ ಅಗತ್ಯವಿಲ್ಲ. ಹಳ್ಳಿಗಾಡಿನ ಮಕ್ಕಳಿಗೇನಿದ್ದರೂ ತೋಟ ಗದ್ದೆಗಳೇ ಸಮ್ಮರ್ ಕ್ಯಾಂಪ್‌ನ ಅಡ್ಡಾ. ಪ್ರಕೃತಿ ನಡುವೆ ಸಿಗುವ ಆಟಿಕೆಗಳ ಹಸಿರ ಕಂಪು ತಂಪು ದೇಹಕ್ಕೂ ಬುದ್ಧಿಗೂ ಅಸಾಮಾನ್ಯ ಇಂಪನ್ನು ಕೊಡುತ್ತವೆ.

'ಆಗೆಲ್ಲಾ ರಜಾ ಬಂದರೆ ಸಾಕು ಊರಿಗೆ ಬಂದ ಮಕ್ಕಳೆಲ್ಲಾ ನಮ್ಮನೆ ಅಂಗಳಕ್ಕೆ ಹಾಜರಾಗುತ್ತಿದ್ದರು, ತೆಂಗಿನ ಗರಿಯ ಆಟಿಕೆಗಳ ಅವರ ಬೇಡಿಕೆಯನ್ನು ಈಡೇರಿಸುವಲ್ಲಿ ಸಾಕಾಗುತ್ತಿತ್ತು. ಆದರೂ ಅದರಲ್ಲೇನೋ ಸಂತೃಪ್ತಿ, ಈಗಿನ ಮಕ್ಕಳಿಗೆ ಅದೆಲ್ಲಾ ಬೇಕಾಗಿಲ್ಲ. ನೂರಾರು ರೂಪಾಯಿ ಕೊಟ್ಟ ಪ್ಲಾಸ್ಟಿಕ್ ಆಟಿಕೆಗಳೇ ಬೇಕು, ಸ್ವಲ್ಪ ದೊಡ್ಡವರಾದರೆ ಸಾಕು, ಕಂಪ್ಯೂಟರ್, ಮೊಬೈಲ್‌ನಲ್ಲೇ ಆಟ ಆಡೋದನ್ನು ಶುರು ಮಾಡುತ್ತಾರೆ. ಅವರಿಗೆ ಈ ಮಣ್ಣಿನ ವಾಸನೆಯ ರುಚಿಯ ಹಂಗೇ ಇಲ್ಲ. ಆಟ ಊಟ ಪಾಠ ಎಲ್ಲವೂ ಪ್ರಕೃತಿಯ ಮಾತೆಯ ಮಡಿಲಲ್ಲೇ ಇದೆ ಎಂಬುದು ಇವರಿಗೆ ಗೊತ್ತಿಲ್ಲ, ಎಂದು ವಿಷಾದ ವ್ಯಕ್ತಪಡಿಸುತ್ತಾರೆ ಸುಬ್ರಹ್ಮಣ್ಯದ ಹಿರಿಜೀವ ಪದ್ಮಯಜ್ಞ.

### ಪ್ರಕೃತಿದತ್ತ ಆಟಿಕೆಗಳ ಪುನರುಜ್ಜೀವನದ ಪ್ರಯತ್ನ

ಇದು ಕೇರಳ ಮೂಲದ ಅನಿವಾಸಿ ಭಾರತೀಯ ನೌಶಿದ್ ಪರಮ್ಮಲ್ ಕಥೆ. ದುಬೈನಲ್ಲಿ ವಾಸವಿದ್ದ ಈ ಗ್ರಾಫಿಕ್ ಡಿಸೈನರ್ ಐಷಾರಾಮಿ ಬದುಕಿನ ಟೊಳ್ಳುತನವನ್ನು ನಿರಾಕರಿಸಿ ಕೇರಳದ ಕಣ್ಣೂರಿಗೆ ಬಂದು ಮೂರು ವರ್ಷದ ಹಿಂದೆ ಕೃಷಿಯಲ್ಲಿ ನಿರತನಾದವನು. ಪ್ರಕೃತಿ ಜೊತೆಗಿನ ಒಡನಾಟದಲ್ಲಿ ಹಸಿರಾಟಿಕೆಗಳತ್ತ ಆಕರ್ಷಿತನಾದ ಈತ ಪ್ರಸ್ತುತ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ತೆಂಗಿನ ಗರಿಯ ಆಟಿಕೆಯನ್ನು ಹೇಳಿಕೊಡುವಲ್ಲಿ ನಿರತನಾಗಿದ್ದಾನೆ.

ಬಹುಶಃ ಇಂತಹ ಪ್ರಯತ್ನಗಳು ಗ್ರಾಮೀಣ ಪ್ರದೇಶಗಳಲ್ಲಿ ನಡೆದರೆ ಆರೋಗ್ಯಕ್ಕೆ ಮಾರಕವಾಗುವ ಪ್ಲಾಸ್ಟಿಕ್ ಆಟಿಕೆಗಳಿಂದ ಮಕ್ಕಳನ್ನು ರಕ್ಷಿಸುವ ಪ್ರಯತ್ನ ನಡೆಯಬಹುದು. ನೋಡಲು ಆಕರ್ಷಕವಾಗಿರುವ ಪ್ಲಾಸ್ಟಿಕ್ ಆಟಿಕೆಗಳ ರಾಸಾಯನಿಕಗಳು ನಮ್ಮ ನಿಮ್ಮ ಮನೆಯ ಕಂದಮ್ಮಗಳ ಹೊಟ್ಟೆಗೆ ಸೇರುತ್ತವೆ. ಸಂಶೋಧನಾ ವರದಿಗಳ ಪ್ರಕಾರ ಕ್ಯಾನ್ಸರ್ ಸೇರಿದಂತೆ ಜೀವಕ್ಕೆ ಮಾರಕವಾಗುವ ಹಲವಾರು ರೋಗಗಳಿಗೆ ಪ್ಲಾಸ್ಟಿಕ್ ಆಟಿಕೆಗಳು ಕಾರಣವಾಗುತ್ತವೆ. ಇಷ್ಟೇ ಅಲ್ಲದೆ ಈ ಆಟಿಕೆಗಳು ಮನೆಯ ಆರ್ಥಿಕ ಆರೋಗ್ಯಕ್ಕೂ ಕಂಟಕವೇ. ಪ್ರಕೃತಿದತ್ತ ಆಟಿಕೆಗಳಲ್ಲಿ ಸಿಗುವ ಆಹ್ಲಾದ, ಆರೋಗ್ಯಪೂರ್ಣ ಕಲಿಕೆ ಯಾಂತ್ರಿಕ ಆಟಿಕೆಗಳಲ್ಲಿ ಸಿಗಲು ಸಾಧ್ಯವಿಲ್ಲ. ತಾವೇ ತಯಾರಿಸಿದ ಆಟಿಕೆಗಳಲ್ಲಿ ಸಿಗುವ ಆನಂದ ಬಹುಶಃ ಸಾವಿರಾರು ರೂಪಾಯಿ ಕೊಟ್ಟು ಖರೀದಿಸುವ ಆಟಿಕೆಗಳಲ್ಲಿ ಖಂಡಿತಾ ಸಿಗಲಾರದು. ಸಾಧ್ಯವಾದಷ್ಟೂ ಮಕ್ಕಳಿಗೆ ಪರಿಸರದ ನೈಜತೆಯ ಆಟಪಾಠಗಳನ್ನು ಕಲಿಸುವ ಪ್ರಯತ್ನಕ್ಕೆ ಕೈಹಾಕಿದರೆ ಆರೋಗ್ಯಪೂರ್ಣ ಪೀಳಿಗೆಯೊಂದನ್ನು ತಯಾರು ಮಾಡಲು ಸಾಧ್ಯ.



ಚಿತ್ರಗಳು ಲೇಖಕರವು